ಅನುಬಂಧ-I

ಕರ್ನಾಟಕ ವಿಧಾನ ಸಭೆ

ಹತ್ತನೆಯ ವಿಧಾನ ಸಭೆ

(ಐದನೆಯ ಅಧಿವೇಶನ)

ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು

(ತಿದ್ದುಪಡಿ ಮತ್ತು ಮಾನ್ಯೀಕರಣ) ವಿಧೇಯಕ, 1996

(1996ರ ವಿಧಾನ ಸಭಾ ವಿಧೇಯಕ ಸಂಖ್ಯೆ 4)

ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು, 1972ನ್ನು ತಿದ್ದುಪಡಿ ಮಾಡಲು ಮತ್ತು ಮಾನ್ಯಗೊಳಿಸಲು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಮಯಗಳು 1972ನ್ನು ತಿದ್ದುಪಡಿ ಮಾಡುವುದು ಮತ್ತು ಮಾನ್ಯಗೊಳಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೇಳನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಬೆಂಗಳೂರು ನಗರ ಯೋಜನಾ ಪ್ರದೇಶ ವಲಯ ವಿನಿಯಮಗಳು (ತಿದ್ದುಪಡಿ ಮತ್ತು ಮಾನ್ಯೀಕರಣ) ಅಧಿನಿಯಮ, 1996 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. ಕರಡು ಅಭಿವೃದ್ಧಿ ಯೋಜನೆಗೆ ಲಗತ್ತಿಸಿರುವ ವಲಯ ವಿನಿಮಯಗಳಿಗೆ ತಿದ್ದುಪಡಿ.- ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಯಾವುದೇ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಇದ್ದರೂ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರ (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 11) ಅಡಿಯಲ್ಲಿ ರಚಿಸಿದ ಕರಡು ಅಭಿವೃದ್ಧಿ ಯೋಜನೆಗೆ ಲಗತ್ತಿಸಿದ 1972ರ ಮೇ 22ರಿಂದ 1984ರ ಅಕ್ಟೋಬರ್ 12ರವರೆಗಿನ ಅವಧಿಯಲ್ಲಿದ್ದ ವಲಯ ವಿನಿಮಯಗಳನ್ನು (ಇಲ್ಲಿ ಇನ್ನು ಮುಂದೆ ಸದರಿ ವಲಯ ವಿನಿಮಯಗಳಿಂದು ಉಲ್ಲೇಖಿಸಲಾಗುವುದು) 1972ರ ಮೇ 22ರಿಂದ ಜಾರಿಗೆ ಬರವಂತೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಮಾರ್ಪಾಟು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

3. ಕೆಲವು ನಿರ್ಮಾಣಗಳನ್ನು ಸಕ್ರಮಗೊಳಿಸುವುದು.- (1) 1961ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದಲ್ಲಿ (1963ರ ಕರ್ನಾಟಕ ಅಧಿನಿಯಮ ಸಂಖ್ಯೆ 11) ಅಥವಾ ಈ ಅಧಿನಿಯಮದ ಮೂಲಕ ಮಾರ್ಪಾಟು ಮಾಡಲಾದ ಸದರಿ ವಲಯ ವಿನಿಮಯಗಳಲ್ಲಿ ಏನೇ ಇದ್ದರೂ, 1972ರ ಮೇ 22ರಿಂದ 1994ರ ಅಕ್ಟೋಬರ್ 12ರವರೆಗಿನ ಅವಧಿಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅನುಮತಿಯನ್ನು ಪಡೆದ ತರುವಾಯ ಈ ಅಧಿನಿಯಮದ ಮೂಲಕ ಮಾರ್ಪಾಟಾದಂಥ ವಲಯ ವಿನಿಮಯಗಳಲ್ಲಿ ಅಥವಾ ಬೆಂಗಳೂರು ಮಹಾನಗರ

ಪಾಲಿಕೆಯು ನೀಡಿದ ಅನುಮತಿಯಲ್ಲಿ ತಿಳಿಸಿರುವುದಕ್ಕಿಂತ ಭಿನ್ನವಾಗಿ ಯಾವುದೇ ಕಟ್ಟಡವನ್ನು ನಿರ್ಮಿಸಿರುವ ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಅಂಥ ನಿರ್ಮಾಣವನ್ನು ಸಕ್ರಮಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸಬಹುದು.

(2)(1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ನಿರ್ಮಾಣಗಳನ್ನು ಸಕ್ರಮಗೊಳಿಸುವ ಉದ್ದೇಶಕ್ಕಾಗಿ ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ಸಮಿತಿ ಇರತಕ್ಕದ್ದು, ಎಂದರೆ :-

(i)	ಸರ್ಕಾರದ ಕಾರ್ಯದರ್ಶಿ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ	-	ಅಧ್ಯಕ್ಷ
(ii)	ಕಮೀಷನರ್ ಬೆಂಗಳೂರು ಮಹಾ ಮಹಾನಗರ ಪಾಲಿಕೆ	-	ಸದಸ್ಯ
(iii)	ಕಮೀಷನರ್ ಬೆಂಗಳೂರು, ಅಭಿವೃದ್ಧಿ ಪ್ರಾಧಿಕಾರ	-	ಸದಸ್ಯ
(iv)	ಪಟ್ಟಣ ಯೋಜನಾ ನಿರ್ದೇಶಕರು	-	ಸದಸ್ಯ ಕಾರ್ಯದರ್ಶಿ

(3) ಸಮಿತಿಯು (1)ನೇ ಉಪ-ಪ್ರಕರಣದ ಅಡಿ ಸ್ವೀಕರಿಸಲಾದ ಅರ್ಜಿಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅದು ಸೂಕ್ತವೆಂದು ಕಂಡುಬಂದಂಥ ವಿಚಾರಣೆಯನ್ನು ನಡೆಸಿದ ತರುವಾಯ, ಅದಕ್ಕೆ (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಭಿನ್ನವಾದ ನಿರ್ಮಾಣವು ಅಧಿನಿಯಮದ ಮೂಲಕ ಮಾರ್ಪಾಟಾದಂಥ ಸದರಿ ವಲಯ ವಿನಿಯಮಗಳಲ್ಲಿ ಅಥವಾ ಬೆಂಗಳೂರು ಮಹಾನಗರ ಪಾಲಿಕೆಯು ನೀಡಿದ ಅನುಮತಿಯಲ್ಲಿ ತಿಳಿಸಿರುವುದಕ್ಕಿಂತ ವಾಸ್ತವಿಕವಾಗಿ ಭಿನ್ನವಾಗಿಲ್ಲವೆಂದು ಮನವರಿಕೆಯಾದರೆ, ಅದು,-

(i) ಕಟ್ಟಡ ಇರುವ ಸ್ಥಳ

(ii) ಭಿನ್ನವಾದ ನಿರ್ಮಾಣದ ಸ್ವರೂಪ ಮತ್ತು ವಿಸ್ತೀರ್ಣ,

(iii) ಇತರ ಯಾವುದೇ ಸುಸಂಗತ ಅಂಶಗಳು.

ಇವುಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸಬಹುದಾದಷ್ಟು ಮೊಬಲಗನ್ನು ಸಂದಾಯ ಮಾಡುವುದಕ್ಕೆ ಒಳಪಟ್ಟು ಸಕ್ರಮಗೊಳಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು.

(4) ರಾಜ್ಯ ಸರ್ಕಾರವು, ಸಮಿತಿಯ ಶಿಫಾರಸ್ಸುಗಳನ್ನು ಸ್ವೀಕರಿಸಿದ ತರುವಾಯ ಮತ್ತು ಅಂಥ ನಿರ್ಮಾಣಗಳನ್ನು ಸಕ್ರಮಗೊಳಿಸುವ ಬಗ್ಗೆ ಅರ್ಜಿದಾರನು ಮೊಬಲಗನ್ನು ಸಂದಾಯ ಮಾಡಿದ ತರುವಾಯ ನಿರ್ಮಾಣವನ್ನು ಸಕ್ರಮಗೊಳಿಸುವಂತೆ ಆದೇಶಿಸಬಹುದು.

4. ಮಾನ್ಯತೆ : ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆಜ್ಞೆಯಲ್ಲಿ ಏನೇ ಇದ್ದರೂ, 1972ರ ಮೇ 22 ರಿಂದ 1984ರ ಅಕ್ಟೋಬರ್ 12 ರವರೆಗಿನ ಅವಧಿಯಲ್ಲಿ ಮಹಾನಗರ ಪಾಲಿಕೆಯು ಕಟ್ಟಡ ನಿರ್ಮಾಣಕ್ಕೆ ನೀಡಿದ ಯಾವುದೇ ಅನುಮತಿ ಮತ್ತು ಅಂಥ ಅನುಮತಿಗೆ ಅನುಗುಣವಾಗಿ ನಿರ್ಮಿಸಲಾದ ಮತ್ತು 3ನೇ ಪ್ರಕರಣದ ಅಡಿ ಸಕ್ರಮಗೊಳಿಸಲಾದ ಕಟ್ಟಡ ನಿರ್ಮಾಣವು ಸಿಂಧುವೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೂಲಕ ಮಾರ್ಪಾಟಾದಂತೆ ಸದರಿ ವಲಯ ವಿನಿಯಮಗಳಿಗೆ ಅನುಗುಣವಾಗಿ ಅನುಮತಿ ನೀಡಲಾಗಿದ್ದರೆ ಮತ್ತು ಕಟ್ಟಡಗಳನ್ನು ನಿರ್ಮಿಸಲಾಗಿದ್ದರೆ

ಹೇಗೋ ಹಾಗೆ, ಎಲ್ಲಾ ಉದ್ದೇಶಗಳಿಗಾಗಿ ಪರಿಣಾಮವನ್ನು ಹೊಂದಿರತಕ್ಕದ್ದು, ಮತ್ತು ತದನುಸಾರವಾಗಿ,

(ಎ) ಹಾಗೆ ನೀಡಲಾದ ಎಲ್ಲಾ ಅನುಮತಿಗಳನ್ನು, ನಿರ್ಮಿಸಲಾದ ಕಟ್ಟಡಗಳನ್ನು ಅಥವಾ ಮಾಡಲಾದ ವ್ಯವಹರಣೆಗಳು ಅಥವಾ ಕೃತ್ಯಗಳನ್ನು ಅಥವಾ ಕೈಗೊಳ್ಳಲಾದ ಕ್ರಮಗಳನ್ನು ಕಾನೂನಿಗೆ ಅನುಸಾರವಾಗಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಯಾವಾಗಲೂ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು;

(ಬಿ) ಬೆಂಗಳೂರು ಮಹಾನಗರ ಪಾಲಿಕೆಯ ಅನುಮತಿ ಪಡೆದು ನಿರ್ಮಿಸಲಾಗಿದ್ದಂಥ ಮತ್ತು 3ನೇ ಪ್ರಕರಣದಡಿ ಸಕ್ರಮಗೊಳಿಸಲಾದ ಕಟ್ಟಡಗಳ ಸಂಬಂಧದಲ್ಲಿ ಅಂಥ ಅನುಮತಿಯನ್ನು ರದ್ದುಗೊಳಿಸಲು ಅಥವಾ ಕಟ್ಟಡಗಳನ್ನು ಕೆಡವಿ ಹಾಕಲು ಅಥವಾ ಈ ಅಧಿನಿಯಮದಿಂದ ಮಾರ್ಪಾಟು ಮಾಡಲಾದ ಸದರಿ ವಲಯ ವಿನಿಯಮಗಳಿಗನುಸಾರವಾಗಿ ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಯಾವುದೇ ಕೃತ್ಯದ ಸಿಂಧುತ್ವವನ್ನು ಪ್ರಶ್ನಿಸಲು ಯಾವುದೇ ನ್ಯಾಯಾಲಯ ಅಥವಾ ಯಾವುದೇ ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ಯಾವುದೇ ದಾವೆ ಅಥವಾ ಮುಂದುವರಿಸಿಕೊಂಡು ಬರತಕ್ಕದ್ದಲ್ಲ ಮತ್ತು ಈ ಅಧಿನಿಯಮದಿಂದ ಮಾರ್ಪಾಟು ಮಾಡಲಾದ ಸದರಿ ವಲಯ ವಿನಿಯಮಗಳಿಗನುಸಾರವಾಗಿ ನೀಡಲಾದ ಯಾವುದೇ ಅಂಥ ಅನುಮತಿ ಅಥವಾ ನಿರ್ಮಿಸಲಾದ ಕಟ್ಟಡ, ಕೈಗೊಂಡ ಯಾವುದೇ ಕ್ರಮ ಅಥವಾ ಮಾಡಿದ ಯಾವುದೇ ಕೃತ್ಯವನ್ನು ಅನೂರ್ಜಿತವೆಂದು ಅಥವಾ ಕಾನೂನುಬಾಹಿರವೆಂದು ಘೋಷಿಸುವ ಯಾವುದೇ ಡಿಕ್ರಿ, ತೀರ್ಪು ಅಥವಾ ಆಜ್ಞೆಯನ್ನು ಯಾವುದೇ ನ್ಯಾಯಲಯವು ಜಾರಿಗೊಳಿಸತಕ್ಕದಲ್ಲ ಅಥವಾ ಮನ್ನಣೆ ನೀಡತಕ್ಕದ್ದಲ್ಲ.

ಅನುಸೂಚಿ

(2ನೇ ಪ್ರಕರಣ ನೋಡಿ)

ಬೆಂಗಳೂರು ನಗರ ಯೋಜನಾ ಪ್ರದೇಶದ ಕರಡು ಅಭಿವೃದ್ಧಿ ಯೋಜನೆಗೆ ಲಗತ್ತಿಸಲಾದ ಎ, ಬಿ ಮತ್ತು ಸಿ ವಲಯಗಳಿಗೆ ಅನ್ವಯಿಸುವ ಮಾರ್ಪಾಡು ಮಾಡಲಾದ ವಲಯ ವಿನಿಯಮಗಳು.

ನಿವೇಶನದ ವಿಸ್ತೀರ್ಣ	ಗರಿಷ್ಠ ಸಂಖ್ಯೆಯ ಅಂತಸ್ತುಗಳು	ಅನುಮತಿಸ ಬಹುದಾದ ಗರಿಷ್ಠ ವ್ಯಾಪ್ತಿ	ಅನುಮತಿಸ ಬಹುದಾದ ಗರಿಷ್ಠ (ಎಫ್.ಎ.ಆರ್.)	ಕಟ್ಟಡಗಳು ಗರಿಷ್ಠ ಎತ್ತರ	ಕನಿಷ್ಠ ರಸ್ತೆ ಅಗಲ
500 ಚದರ ಮೀಟರುಗಳ ವರೆಗೆ	ಕೆಳ ಅಂತಸ್ತು + ನೆಲ ಅಂತಸ್ತು +7	ಶೇ. 80	2-00	25 ಮೀಟರುಗಳು	7.5 ಮೀಟರುಗಳು
500 ಚದರ ಮೀಟರು ನೆಲಗಳಿಗೂ ಮೇಲ್ಪಟ್ಟು	ಕೆಳ ಅಂತಸ್ತು + ಅಂತಸ್ತು + 13	ಶೇ.70	3-00	5 ಮೀಟರುಗಳು	9.0 ಮೀಟರುಗಳು

ದಿನಾಂಕ :